ವಿಶೇಷ ಉಪನ್ಯಾಸ ಕಾರ್ಯಕ್ರಮ

ಸಂಯೋಜನೆ: ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ ಹಾಗೂ ಕನ್ನಡ ವಿಭಾಗ

ದಿನಾಂಕ: 04.08.2026 **ಸ್ಥಳ: ಕುವೆಂಪು ಸಭಾಂಗಣ, ಕುಪ್ಪಳಿ.**

ಕಾರ್ಯಕ್ರಮದ ವರದಿ

ದಿನಾಂಕ 04.08.2026 ರಂದು **ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ ಹಾಗೂ ಕನ್ನಡ ವಿಭಾಗದ** ಸಹಯೋಗದಲ್ಲಿ **"**ವಿಶೇಷ ಉಪನ್ಯಾಸ ಕಾರ್ಯಕ್ರಮ"ವನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಲಾಗಿತ್ತು.

"ಶಿಕ್ಷಣ ಎಂದರೆ ಕೇವಲ ಅಂಕ ಗಳಿಕೆಯಲ್ಲ; ಪ್ರತಿಯೊಬ್ಬ ಮನುಷ್ಯನೂ ಶಿಕ್ಷಣದ ಮೂಲಕ ವಿಶ್ವಮಾನವನಾಗಬೇಕು ಎಂಬುದೇ ಶಿಕ್ಷಣದ ಅಂತಿಮ ಗುರಿಯಾಗಬೇಕು," ಎಂದು ಚಿಂತಕ ಹಾಗೂ ವಕ್ತಾರ ಹರ್ಷ ಕುಮಾರ್ ಕುಗ್ವೆ ಅವರು ಪ್ರತಿಪಾದಿಸಿದರು.
ಅವರು ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ, ಹಾಗೂ ತುಂಗಾ ಮಹಾವಿದ್ಯಾಲಯ, ತೀರ್ಥಹಳ್ಳಿ ಇವುಗಳ ಜಂಟಿ ಆಶ್ರಯದಲ್ಲಿ ಕುಪ್ಪಳಿಯ ಕುವೆಂಪು ಕನ್ನಡ ಅಧ್ಯಯನ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ **'ಶಿಕ್ಷಣವನ್ನು ಕುರಿತ ಕುವೆಂಪು ಚಿಂತನೆಗಳು'** ವಿಷಯದ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.
"ಕುವೆಂಪು ಅವರ ಆಶಯದಂತೆ ವಿದ್ಯಾರ್ಥಿಗಳು ತಮ್ಮ ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಬೇಕು. ವಿದ್ಯಾರ್ಥಿಗಳು ಕೇವಲ ಭತ್ತ ತುಂಬುವ ಚೀಲಗಳಾದರೆ ಅದು ಜ್ಞಾನದ ಅಲ್ಪಕಾಲಿಕ ಗ್ರಹಿಕೆ ಅಷ್ಟೇ ಆಗುತ್ತದೆ. ಆದರೆ, ಅವರೇ ಭತ್ತ ಬೆಳೆಯುವ ಗದ್ದೆಗಳಾದರೆ ಇಡೀ ಸಮಾಜಕ್ಕೆ ದೊಡ್ಡ ಕೊಡುಗೆಯಾಗುತ್ತದೆ" ಎಂದು ಕುವೆಂಪು ಅವರ ವಿಚಾರಗಳನ್ನು ಸವಿಸ್ತಾರವಾಗಿ ವಿವರಿಸಿದರು. ಇಂದು ವಿದ್ಯಾರ್ಥಿಗಳು ಕೃತಕ ಬುದ್ಧಿಮತ್ತೆಯ ಕಡೆಗೆ ವಾಲುತ್ತಿದ್ದಾರೆ. ಸಮಾಜವು ಜಾತಿ ಧರ್ಮಗಳಿಗೆ ಮನುಷ್ಯನನ್ನು ಸೀಮಿತಗೊಳಿಸುತ್ತಿದೆ. ಇವುಗಳ ಗೋಡೆಯನ್ನು ಕೆಡುವ ಬೇಕಾದರೆ ವಿದ್ಯಾರ್ಥಿಗಳು ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವಿಶ್ವವಿದ್ಯಾಲಯದ ಕುಲಸಚಿವ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಮಾತನಾಡಿ ವಿದ್ಯಾರ್ಥಿ ದೆಸೆಯಿಂದನು ನನ್ನನ್ನು ಕಾಡಿದ್ದು ಕುವೆಂಪು ಅವರ ಬರಹಗಳು. ಇಂದಿನ ಯುವತಲಮಾರಿಗೆ ಕುವೆಂಪು ಅವರ ಚಿಂತನೆಗಳ ಅಧ್ಯಯನ ಬಹಳ ಅಗತ್ಯವಾದುದು ಎಂಬುದನ್ನು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಡಿ.ವಿ. ಪರಮಶಿವಮೂರ್ತಿ ಅವರು ಮಾತನಾಡಿ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಹಂತದಿಂದ ಹಿಡಿದು ಪ್ರತಿ ವರ್ಷವೂ ಪಠ್ಯಪುಸ್ತಕದಲ್ಲಿ ಕುವೆಂಪು ಅವರ ಚಿಂತನೆಗಳನ್ನು ಪಠ್ಯಕ್ರಮದಲ್ಲಿ ಇಡುವ ಅಗತ್ಯತೆ ಇದೆ ಎಂಬುದನ್ನು ಒತ್ತಿ ಹೇಳಿದರು. ವೇದಿಕೆಯಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯದ ಡಾ. ಮಾಧವ ಪೆರಾಜೆ, ತುಂಗಾ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ. ಗಣಪತಿ ಬಿ., ಪ್ರಾಂಶುಪಾಲರಾದ ಡಾ. ಆರ್. ಕುಮಾರಸ್ವಾಮಿ, ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಡಾ. ರಮೇಶ ಡಿ., ಗಡಿಕಲ್ ಗ್ರಾಮ ಪಂಚಾಯತಿ ಮಾಜಿ ಸದಸ್ಯರಾದ ಎಚ್.ಸಿ. ಸರೋಜ ಹಾಗೂ ಅಧ್ಯಯನ ಕೇಂದ್ರದ ಮುಖ್ಯಸ್ಥರಾದ ಡಾ. ಬಿ.ಎಂ. ಪುಟ್ಟಯ್ಯ ಉಪಸ್ಥಿತರಿದ್ದರು.

ಶಿರಾಳಕೊಪ್ಪದ ಸಹಪ್ರಾಧ್ಯಾಪಕರಾದ ರಾಜೇಂದ್ರ ಟಿ. ಅವರು ಕುವೆಂಪು ಅವರ ಕವನವನ್ನು ಗಾಯನ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಭಾವಪೂರ್ಣ ಚಾಲನೆ ನೀಡಿದರು. ಸಹಾಯಕ ಪ್ರಾಧ್ಯಾಪಕ ರತ್ನಾಕರ ಸಿ. ಕುನುಗೋಡು ಅವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಕುವೆಂಪು ಕನ್ನಡ ಅಧ್ಯಯನ ಕೇಂದ್ರದ ಸಂಶೋಧನಾ ವಿದ್ಯಾರ್ಥಿಗಳು, ಸಂಶೋಧನಾ ಮಾರ್ಗದರ್ಶಕರು, ಎನ್ ಆರ್ ಪುರ ಹಾಗೂ ತುಂಗಾ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಬೋಧಕ–ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಕಾರ್ಯಕ್ರಮದ ಛಾಯಾಚಿತ್ರಗಳು:



ಕಾರ್ಯಕ್ರಮದ ವೇದಿಕೆಯ ದೃಶ್ಯ



ಸಭಿಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ದೃಶ್ಯ

ಮುಖ್ಯಸ್ಥರು
ಕನ್ನಡ ವಿಭಾಗ

ಪ್ರಾಂಶುಪಾಲರು